ಮಂಡಿ ಕುಮಾರ್, ಬೆಂಗಳೂರು

ಹೆಣ್ಣಿಗೆ ಪ್ಯಾಂಟ್‌ಟಾಪ್; ಸೀರೆರವಿಕೆ; ಇವುಗಳಲ್ಲಿ ಯಾವುದು ಚೆನ್ನ?



see ರೇ... ಎಂದು ಮತ್ತೆ ಮತ್ತೆ ಆಕರ್ಷಿಸುವ ಹೆಣ್ಣು ಏನು ತೊಟ್ಟರೂ ಟಾಪ್.

ಬಿ.ಆರ್. ಉಷಾ, ಬೆಂಗಳೂರು

ರಾಂ, ನೀವು ಹದಿನಾಲ್ಕು ವರ್ಷ ಕಾಡಿಗೆ ಹೋಗೋದು ಯಾವಾಗ?

ಕಲಿಯುಗದಲ್ಲಿ ಕಾಲದ ಕ್ವಾಂಟಿಟಿ ತಗ್ಗಿದೆ. ಈಗೇನಿದ್ದರೂ ಆಗಾಗ್ಗೆ 14 ದಿನದ ಕ್ವಾರಂಟೈನ್.

ಡಾ. ವಿ. ಪುಗಳೇಂದಿ, ಬಳ್ಳಾರಿ

ತಳ್ಳುಬಂಡಿಯಲ್ಲಿ ತರಕಾರಿ ಮಾರುವವನಿಗೆ ಕಲ್ಲುಬಂಡೆಯಲ್ಲಿ ಕರ್ತನನ್ನು ಸೃಷ್ಟಿಸಲು ಹೇಳಿದರೆ?

ಸುವರ್ಣ ಗುಡ್ಡೆ ಕೋಸಿ ಹುರುಳಿರುವ ಗೋರಿಕಾಯುವನನ್ನು ಕಡೆಯಲು ನುಗ್ಗೇಬಿಡುವನಂತೆ.

ಶ್ರೀನಿವಾಸನ್ ಎಸ್.ಕೆ. ಬೆಂಗಳೂರು

ಸೀತೆಯ ಪಾತ್ರಕ್ಕೆ ಕೊಟ್ಟ ಪ್ರಾಮುಖ್ಯತೆಯ ನೂರರ ಒಂದಂಶವನ್ನೂ ಊರ್ಮಿಳೆಯದಕ್ಕೆ ಕೊಟ್ಟಿಲ್ಲವಲ್ಲಾ...?



ವಾಲ್ಮೀಕಿ ಪಾತ್ರ ಪ್ರದಾನ ಮಾಡುವ ಕಾಲದಲ್ಲಿ ಪಡಿತರ ಪದ್ಧತಿ ಜಾರಿಯಲ್ಲಿರಲಿಲ್ಲವಂತೆ.

ವಿ. ಹೇಮಂತಕುಮಾರ್, ಬೆಂಗಳೂರು

ತಲೆಗೆ ಹೆಲ್ಮೆಟ್ ಹಾಕದವರು ಮುಖಕ್ಕೆ ಮಾಸ್ಕ್ ಹಾಕ್ತಾರಾ ರಾಂಜೀ?

ಊಹೂಂ. ಭಸ್ಮಾಸುರನಿಗೆ ತನ್ನದೇ ತಲೆ ಸುಡುವವರೆಗೆ ಬುದ್ಧಿ ಬರದು.

ವಿದ್ಯಾ ಎನ್. ಪೈ, ಕಾಸರಕೋಡ

ಬದುಕಿನಲ್ಲಿ ಅನುಭವ ಕಲಿಸುವ ಪಾಠವೇ ದೊಡ್ಡದು. ಏಕೆ?

ಮನಸ್ಸಿನ ಮೇಲೋ, ದೇಹದ ಮೇಲೋ ಅಚ್ಚಳಿಯದ ಕಲೆ ಮೂಡಿಸುವುದರಿಂದ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ

ಹಬ್ಬುತ್ತಿರುವ ಕೊರೊನಾಕ್ಕೆ ಮುಖ್ಯ ಕಾರಣವೇನು?

ಅದಕ್ಕಿಂತಲೂ ವೇಗವಾಗಿ ಹಬ್ಬುತ್ತಿರುವ ನಮ್ಮ ಬೇಜವಾಬ್ದಾರಿತನ.

ಆರ್. ಮಧುಸೂದನ್, ಹಾಸನ

ಗೋವಿನ ಜನ್ಮ ಪಡೆಯಲು ಯಾವ ಪುಣ್ಯದ ಕೆಲಸ ಮಾಡಿರಬೇಕು?

ಮಗುವಿನ ಪಾಲನ್ನು ಕಿತ್ತು ಇತರರ ಉದ್ಧಾರಕ್ಕೆ ನೀಡಿರಬೇಕು.

ಪಿ. ಜಯವಂತ ಪೈ, ಕುಂದಾಪುರ

ಕೋಟ್ಯಧೀಶನೊಬ್ಬ ಜುಜುಬಿ ಸ್ಯಾನಿಟೈಸರ್ ಕದ್ದು ಸಿಕ್ಕಿಬಿದ್ದನಂತಲ್ಲಾ...?

ಕೋಡುಗಲ್ಲಿನ ಮೇಲೆ ನಿಂತವರಿಗೆ ಹಳ್ಳದ್ದೇ ಆಕರ್ಷಣೆ!

ಎನ್. ವೆಂಕಟೇಶ್ ರಾಜು, ಊರಿಲ್ಲ

ನಿಜ ಹೇಳಿ, ಈ ಸಮಾಜ ಸುಧಾರಿಸತ್ತೋ ಇಲ್ವೋ?

ಸುಧಾರಿಸತ್ತೆ ಅಳುವ ಮಕ್ಕಳನ್ನು, ತಂಟೆಕೋರ ಭಿನ್ನಮತೀಯರನ್ನು.

ಮಲ್ಲಿಕಾರ್ಜುನ, ಸುರಧೇನುಪುರ

ಉಪಚುನಾವಣೆಗಳು ಪ್ರಜಾಪ್ರಭುತ್ವದ ಉಪ ಉತ್ಪನ್ನಗಳು ಅಂತಿದಾನಲ್ಲ ಇಲ್ಲೊಬ್ಬ ಮತದಾರ?

ಓಹ್! ಅವನು ಮತದಾರನಲ್ಲ, ಮತವ್ಯಭಿಚಾರಿ.

ಅನಂತಪದ್ಮನಾಭ, ಮೈಸೂರು

ಮಾನವನ ಕಣ್ಣು ಎಕ್ಸ್‌ರೇ ಕಣ್ಣಿನಂತೆ ಇದ್ದರೆ ಹೇಗಿರುತ್ತಿತ್ತು ರಾಮ್‌ಜಿ?

'ಚೆಲುವೆಯ ಫಿಬುಲಾ ಚೆನ್ನ; ಕೊರಳಿನ ಕಾಲರ್‌ಬೋನ್ ಚೆನ್ನ' ಎಂಬ ಗೀತೆಗಳು ಹುಟ್ಟುತ್ತಿದ್ದವು.

ಮಹಾವೀರ ಕಾಸರ, ಶಿವಮೊಗ್ಗ

ಮೂಢನಂಬಿಕೆಗಳನ್ನು ವಿರೋಧಿಸಬೇಕಾದ ಟಿವಿ ಜ್ಯೋತಿಷಿಗಳ ಕಾರ್ಯಕ್ರಮ ಬಿತ್ತರಿಸುವುದೇಕೆ?

ಜ್ಯೋತಿಷಿಯನ್ನು ಹುಳದಂತೆ ಬಳಸಿ ಕಾಸಿಗೆ ಬಲೆ ಬೀಸುವ ಮೀನ್ ಮೆಂಟಾಲಿಟಿಯೇ ಕಾರಣ.

## ಬಹುಮಾನಿತ ಪ್ರಶ್ನೆ

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ

ಲಾಲಿಸಿದರೆ ಮಕ್ಕಳು; ಪೂಜಿಸಿದರೆ ದೇವರು; ಹೂಡಿದರೆ ಒಲೆ; ಕೂಡಿದರೆ ಗಂಡ; ಮಾಡಿದರೆ ಸಂಸಾರ. ಏನಿದರ ಅರ್ಥ?

ಗುಣಕ್ಕೆ ತಕ್ಕ ಮಣೆ ಹಾಕದಿದ್ದರೆ ಅರ್ಥ ಅನರ್ಥ.

ಕಾವ್ಯಶ್ರೀ ಪತ್ರಿಮಠ, ಸುರಪುರ

ಜನ್ಮಕುಂಡಲಿಯ ಬಗ್ಗೆ ನಿಮ್ಮ ಅಭಿಪ್ರಾಯ?

ಸಂಬಂಧ ಇಷ್ಟವಾಗದಿದ್ದಾಗ ತಪ್ಪಿಸಿಕೊಳ್ಳಲು ಬಳಸುವ ಅತ್ಯುತ್ತಮ ಸಾಧನ.

ಬಿ. ಚಂದ್ರೇಗೌಡ, ಬೆಂಗಳೂರು

ಹಾರಕ್ಕೂ, ಆಹಾರಕ್ಕೂ ಏನು ವ್ಯತ್ಯಾಸ?

ತುಷ್ಟಿಗೊಂದು, ಪುಷ್ಟಿಗೊಂದು.

ಪಿ.ಜೆ. ರಾಘವೇಂದ್ರ, ಮೈಸೂರು

ಎಲ್ಲ ಕ್ಷೇತ್ರದವರೂ ವಾಟ್ಸಾಪ್ ಗ್ರೂಪ್ ಮಾಡಿಕೊಂಡಿದ್ದರೂ ರಾಜಕಾರಣಿಗಳೇಕೆ ಇನ್ನೂ ಮಾಡಿಕೊಂಡಿಲ್ಲ?

'ಅಡ್ಮಿನ್' ಆದರೂ ಮೂರ್ಕಾಸು ಗಿಟ್ಟದ ಗುಂಪು ರಾಜಕಾರಣಿಯ ನಾಯಿಯನ್ನೂ ಸೆಳೆಯದು.

ವಿ. ಹಮೀದ್, ವಿಟ್ಲ

ಪ್ರೇಯಸಿಯ ನಾಚಿಕೆಗೂ, ಮಡದಿಯ ನಾಚಿಕೆಗೂ ಇರುವ ವ್ಯತ್ಯಾಸವೇನು?



ಪ್ರೇಯಸಿಯ ನಾಚಿಕೆ ದೀಪಾವಳಿ; ಮಡದಿಯ ನಾಚಿಕೆ ನಿತ್ಯೋತ್ಸವ.

ಜಾನೆಟ್ ವತ್ಸಲ, ಊರಿಲ್ಲ

ಕೊರೊನ ಪದ ಕೇಳಿದರೆ ನನಗೆ ಜ್ವರ, ಕೆಮ್ಮು, ಶೀತ ಬಂದಂತೆನಿಸುತ್ತೆ. ಏನ್ಮಾಡಲಿ ಸರ್?

ವ್ಯಾಕ್ಸಿನ್ ಪದವನ್ನು ಆಗಾಗ್ಗೆ ಕೇಳಿ; ಗುಣವಾದಂತೆ ಅನಿಸೀತು.

ಅನಸೂಯ ಟಿ. ಕೇದಿಗೆಮನೆ

ಮನಸ್ಸಂತೋಷ ದೀರ್ಘ ಕಾಲ ಉಳಿಯಬೇಕಾದರೆ ಏನು ಮಾಡಬೇಕು?

ನ್ಯೂಸ್ಚಾನಲ್, ಗೋಳ್ಸೀರಿಯಲ್‌ಗಳಿಂದ ದೂರವಿರಬೇಕು.

■ ರಾಮ್

ಪ್ರಶ್ನೆ ಕಳುಹಿಸಲು: editorsu@sudha.co.in